ಇದು ಮೊಣಕಾಲಿನವರೆಗೆ ಬರುತ್ತದೆ. ಸ್ಟ್ರೈಟ್ ಕಟ್ ಇರುವ ಉಡುಪುಗಳು ಥಟ್ಟನೆ ಸ್ಕರ್ಟ್‌ನಂತೆ ಕಾಣಿಸುತ್ತದೆ. ಸೊಂಟದಿಂದ ಕೆಳಗೆ ಬಲೂನ್‌ನಂತೆ ಊದಿಕೊಂಡಿರುವ ವಿನ್ಯಾಸ ಹೆಚ್ಚು ಟ್ರೆಂಡಿ ಎನಿಸಿದೆ.

ಪ್ರಾರಂಭದಲ್ಲಿ ಜರ್ಸಿ, ಸಿಲ್ಕ್ ವಸ್ತ್ರಗಳಲ್ಲಿ ಇದನ್ನು ಹೆಚ್ಚಾಗಿ ತಯಾರಿಸಲಾಗುತ್ತದೆ. ಈಗ ಎಲ್ಲಾ ಬಗೆಯ ಫ್ಯಾಬ್ರಿಕ್‌ಗಳಲ್ಲಿಯೂ ಲಭ್ಯವಿದೆ. ರೆಟ್ರೊ ಶೈಲಿಯನ್ನು ನೆನಪಿಸುವ ಪೋಲ್ಕಾ ಡಾಟ್ಸ್ ಮತ್ತು ಫ್ಲೋರಲ್ ವಿನ್ಯಾಸಗಳಲ್ಲಿಯೂ ಈ ಬಗೆಯ ಉಡುಪುಗಳು ಲಭ್ಯವಿವೆ.

2010ರಲ್ಲಿ ಇದರ ವಿಸ್ತರಣೆಯಾದ ಸ್ಲಿಪ್ ರೋಪರ್ ಮಾರುಕಟ್ಟೆ ಪ್ರವೇಶಿಸಿದೆ. ಈ ಮೂಲಕ ಹಗಲಿಗೆ ಮಾತ್ರವೇ ಸೀಮಿತವಾಗಿದ್ದ ಈ ಉಡುಪು ರಾತ್ರಿ ವೇಳೆಯ (ನೈಟ್ ಡ್ರೆಸ್) ಉಡುಪಾಗಿಯೂ ಬದಲಾಗಿದೆ. ಸಮುದ್ರದ ನೀರಿನಲ್ಲಿ ಮೋಜಿನಾಟ ಆಟವಾಡಲು ಈ ಉಡುಪು ಹೆಚ್ಚು ಸೂಕ್ತ. ಪ್ಲಸ್ ಸೈಜ್ ಇರುವವರಿಗೂ ಇದರಲ್ಲಿ ಬಗೆ ಬಗೆ ಆಯ್ಕೆಗಳಿವೆ.

ಪ್ರಯಾಣದ ವೇಳೆಗೆ ಇದು ಹೇಳಿ ಮಾಡಿಸಿದಂತಹ ಉಡುಪು. ಸೆಲೆಬ್ರಿಟಿಗಳ ಏರ್‌ಪೋರ್ಟ್ ನೋಟ ಸಖತ್ ಸುದ್ದಿಯನ್ನು ಮಾಡುತ್ತದೆ. ಹೀಗಾಗಿ ಅವರು ಉಡುಪಿನ ಶೈಲಿ, ಬಣ್ಣಗಳ ಆಯ್ಕೆಯಲ್ಲಿ ಮುತುವರ್ಜಿ ವಹಿಸಿರುತ್ತಾರೆ ಈ ನಟ, ನಟಿಯರು. ಅವರ ಏರ್‌ಪೋರ್ಟ್ ಸಂಗ್ರಹದಲ್ಲಿ ಪ್ಲೇ ಸೂಟಿಗೆ ವಿಶೇಷ ಪ್ರಾಧಾನ್ಯವಿದೆ. ಆಲಿಯಾ, ಗೌತಮಿ, ಪ್ರಿಯಾಂಕಾ, ಪರಿಣಿತಿ... ಹೀಗೆ ಹಲವು ನಟಿಯರು ಪ್ಲೇ ಸೂಟ್ ತೊಟ್ಟು ಠಾಕುಟೀಕಾದ ನಡಿಗೆಯ ಮೂಲಕ ವಿಮಾನ ನಿಲ್ದಾಣದಿಂದ ಹೊರ ಬರುವ ದೃಶ್ಯ ಹಲವು ಬಾರಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಈ ಉಡುಪನ್ನು ಯಾವಾಗ, ಹೇಗೆ ತೊಡಬೇಕು, ಆಯಾ ಸಂದರ್ಭಕ್ಕೆ ತಕ್ಕಂತೆ ಅದರೊಂದಿಗೆ ಏನೇನು ಹೊಂದಿಸಿಕೊಳ್ಳಬೇಕು ಎಂದು ತಿಳಿದುಕೊಳ್ಳುವುದು ಮುಖ್ಯ.

ಹೆಣ್ಣುಮಕ್ಕಳ ಆಕರ್ಷಣೆ ಅಡಗಿರುವುದೇ ನಡುವಿನಲ್ಲಿ. ಪ್ಲೇ ಧರಿಸುವಾಗ ಸೊಂಟದ ಅಂದ ಎದ್ದುಕಾಣುವಂತೆ ನೋಡಿಕೊಳ್ಳುವುದೂ ಮುಖ್ಯ. ಜಂಪ್‌ಸೂಟ್‌ನಂತೆ ಪ್ಲೇಸೂಟ್ ಗಳಲ್ಲಿಯೂ ಬೆಲ್ಟ್ ಇರುತ್ತದೆ. ಇಲ್ಲದೆ ಇದ್ದರೆ ನಿಮ್ಮ ದಿರಿಸಿಗೆ ಹೊಂದುವ ಬೆಲ್ಟ್ ಅಥವಾ ಲೇಸ್ ಒಂದನ್ನು ನೀವೇ ಆಯ್ದುಕೊಂಡು ಜೋಡಿಸಿಕೊಳ್ಳಬಹುದು. ತುಸು ಗಾಢ ಬಣ್ಣದ್ದಾಗಿದ್ದರೆ ವಿಶಾಲವಾದ ಲೆದರ್ ಬೆಲ್ಟ್ ಅಥವಾ ಚೈನ್ ಬೆಲ್ಟ್ ಬೋಲ್ಡ್ ಲುಕ್ ನೀಡುತ್ತದೆ. ಕೆಲವು ಉಡುಪುಗಳಿಗೆ ನಡುವಿನಲ್ಲಿ ಇಲ್ಯಾಸ್ಟಿಕ್ ಇದ್ದು, ಅವು ಸೊಂಟಕ್ಕೆ ಅಂಟಿಕೊಳ್ಳುತ್ತವೆ.



ಪ್ಲೇಸೂಟ್‌ಗಳ ಮೇಲೆ ಓವರ್‌ಕೋಟ್‌ಗಳನ್ನು ಧರಿಸಬಹುದು. ಎಲ್ಲರಿಗೂ ಎಲ್ಲ ಥರದ ಪ್ಲೇಸೂಟ್‌ಗಳು ಹೊಂದುವುದಿಲ್ಲ. ನಿಮ್ಮ ಎತ್ತರ, ಮೈಮಾಟ ಹಾಗೂ ಆಸಕ್ತಿಗೆ ಅನುಗುಣವಾಗಿ ಸರಿಯಾದುದನ್ನು ಆಯ್ದುಕೊಳ್ಳುವುದು ಅಗತ್ಯ.

ಈ ಬಗೆಯ ಉಡುಪಿಗೆ ಲೇಯರ್ ಆಭರಣಗಳು ಹೊಸ ನೋಟ ನೀಡುತ್ತದೆ. ಕಾಲಿಗೆ ಹೈ ಹೀಲ್ಡ್ ಅಥವಾ ಆ್ಯಂಕಲ್ ಲೆಂತ್ ಬೂಟುಗಳು ಹೊಂದುತ್ತವೆ. ಒಂದು ವೇಳೆ ನೀವು ಚಳಿಗೆಂದೇ ವಿಶೇಷವಾಗಿ ಪ್ಲೇಸೂಟ್ ಕೊಳ್ಳಬೇಕೆಂದಿದ್ದರೆ ಫ್ಯಾಬ್ರಿಕ್ ಮೇಲೆ ಗಮನವಿರಲಿ. ಗಾಢವಾದ ಮೇಕಪ್ ಮಾಡಿಕೊಳ್ಳುವ ಬದಲಾಗಿ ಸರಳವಾಗಿ ಕಂಗೊಳಿಸಿ. ಹೆಚ್ಚು ಆಭರಣ ಧರಿಸುವ ಅಗತ್ಯವಿಲ್ಲ. ನಿರಾಭರಣ ಸುಂದರಿಯರಾಗಿರಿ. ಹಾಗೊಮ್ಮೆ ಆಭರಣ ಧರಿಸಬೇಕು ಎನ್ನುವವರು ಹಗುರವಾದ ಆಭರಣಗಳನ್ನೇ ಬಳಸಿ. ಸಾದಾ ಕ್ಲಚ್ ಅಥವಾ ಸ್ಲಿಂಗ್ ಬ್ಯಾಂಗ್‌ಗಳು ಈ ಉಡುಪಿಗೆ ಹೊಸ ನೋಟ ನೀಡುತ್ತದೆ.

ಬೇಸಿಗೆಯ ಪ್ಲೇಸೂಟ್‌ಗೂ ಚಳಿಗಾಲದ ಸೂಟ್‌ಗೂ ಸಣ್ಣ ವ್ಯತ್ಯಾಸ ಇರುತ್ತದೆ. ಬೇಸಿಗೆಯಲ್ಲಿ ಬಹುತೇಕ ಹಗುರವಾದ ಕಾಟನ್ ಫ್ಯಾಬ್ರಿಕ್‌ನ ತೋಳಿಲ್ಲದ ದಿರಿಸಿಗೇ ಆದ್ಯತೆ. ಆದರೆ ಚಳಿಗಾಲಕ್ಕೆ ಬಂದಾಗ ತುಸು ದಪ್ಪವಾದ, ಗಾಢ ಬಣ್ಣದ, ಸಾಮಾನ್ಯವಾಗಿ ತೋಳಿರುವ ವಸ್ತ್ರಗಳೇ ಇರುತ್ತವೆ. ಉಲನ್, ಜರ್ಸಿ, ಟ್ವಿಲ್ ಫ್ಯಾಬ್ರಿಕ್ ಜಂಪ್‌ಸೂಟ್‌ಗಳು ಚಳಿಗಾಲಕ್ಕೆ ಉತ್ತಮ. ಹಾಗೆಯೇ ಉಡುಪಿಗೆ ಸರಿಯಾಗುವಂತೆ ಲೆಗ್ಗಿಂಗ್‌ಗಳನ್ನು ಹೊಂದಿಸಿ ಕೊಳ್ಳಬಹುದು. ಮೊಣಕಾಲಿನವರೆಗೆ ಬರುವ ಉಡುಪಿಗೆ ಸಾಕ್ಸ್ ಧರಿಸಿ, ಶೂ ಹಾಕಿಕೊಳ್ಳುವ ಜೊತೆಗೆ ಅದಕ್ಕೊಪ್ಪುವ ಸ್ಕಾರ್ಫ್ ಧರಿಸಿದರೆ ಶ್ರೀಮಂತ ನೋಟ ನೀಡುತ್ತದೆ.

ಪ್ಲೇಸೂಟ್ ಆಯ್ದುಕೊಳ್ಳುವಾಗ ದೇಹಕ್ಕೆ ಒಪ್ಪುವ ಅಳತೆ ಇರಲಿ. ಅಳತೆ ಸರಿ ಇಲ್ಲದಿದ್ದರೆ ನಿಮ್ಮ ಫ್ಯಾಷನ್ ಪ್ರಜ್ಞೆ ಬುಡಮೇಲಾಗಬಹುದು. ನಿಮ್ಮ ದೇಹಕ್ಕೆ ಸರಿಯಾಗಿ ಹೊಂದಿಕೊಳ್ಳುವ ಜಂಪ್‌ಸೂಟ್ ಆಯ್ದುಕೊಳ್ಳಿ. ತುಂಬಾ ಬಿಗಿಯಾದ ಅಥವಾ ತುಂಬಾ ಸಡಿಲವಾದ ದಿರಿಸು ಬೇಡ.

ಪ್ಲೇ ಸೂಟ್‌ಗಳಲ್ಲಿ ಮಕ್ಕಳಿಗಾಗಿಯೇ ವಿಶೇಷ ವಿನ್ಯಾಸವಿದೆ. ಮೃದುವಾದ ಕಾಟನ್ ಬಟ್ಟೆಗಳಲ್ಲಿಯೂ ದೊರೆಯುವುದರಿಂದ ಮುದ್ದು ಮಕ್ಕಳು ಇನ್ನಷ್ಟು ಚೆಂದವಾಗಿ ಕಂಗೊಳಿಸುತ್ತಾರೆ. ಕೋಲ್ಡ್ ಶೋಲ್ಡರ್ ಮತ್ತು ಕೂಲ್ ಶೋಲ್ಡರ್ ಗಳಲ್ಲಿಯೂ ಈ ಬಗೆಯ ಉಡುಪು ಲಭ್ಯವಿವೆ. ಬಳಕೆದಾರರ ಅಭಿರುಚಿ, ಆಯ್ಕೆಗೆ ತಕ್ಕಂತೆ ಹೊಸ ರೂಪು ಪಡೆಯುತ್ತಿರುವುದು ಇದರ ಹೆಗ್ಗಳಿಕೆ. ■